**ಓ ಎಸ್ ನಂಃ 399/2021**

**ಪಿ. ಡಬ್ಲ್ಯೂ ಃ 1**

**ದಿಃ 09.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಆರ್ ಎಸ್ ವಕೀಲರಿಂದ ಃ**

ನಾನು ನನ್ನ ಪಾಸ್ ಬುಕ್ ನ್ನು ತಂದಿಲ್ಲ. ರೂ. 370750/ ರೂ, ಗಳು ನನ್ನ ತಂಗಿ ವೀಣಾ ಇವರ ಬ್ಯಾಂಕ್ ಖಾತೆಗೆ ಜಮೆ ಆಗಿದೆ ಎಂದರೆ ನನಗೆ ನೆನಪಿಲ್ಲ. ನಾನು ನನ್ನ ಮತ್ತು ನನ್ನ ತಂಗಿಯ ಬ್ಯಾಂಕ್ ಪಾಸ್ ಬುಕ್ ನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಪ್ರತಿವಾದಿಗಳು ತನ್ನ ಪ್ರತಿವಾದ ಪತ್ರದಲ್ಲಿ ನನ್ನ ಖಾತೆಗೆ ಮತ್ತು ನನ್ನ ತಂಗಿಯ ಖಾತೆಗೆ ಹಣ ಜಮಾ ಆಗಿದೆ ಎಂದು ಹೇಳಿದ್ದಾರೆ ಎಂದರೆ ಸರಿ. ಆದರೆ ನಾನು ದಾಖಲಾತಿಯನ್ನು ಪರಿಶೀಲಿಸಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ದಿನಾಂಕ ಃ 27.08.2020 ರಂದು ರೂ.20 ಲಕ್ಷ ಹಾಗೂ ದಿನಾಂಕ ಃ 18.01.2021 ರಂದು 2873500/- ಗಳನ್ನು 16 ನೆ ಪ್ರತಿವಾದಿಗೆ ಬ್ಯಾಂಕ್ ಖಾತೆಗೆ 1 ನೆ ಪ್ರತಿವಾದಿ ಆರ್ ಟಿ ಜಿ ಎಸ್ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಚಿಕ್ಕಮ್ಮ ಇವರು ನಮ್ಮ ತಾಯಿ ಅಕ್ಕ ಇರುತ್ತಾರೆ. ಅವರು ನಾನು ಚೆನ್ನಾಗಿರುತ್ತೇವೆ. ಈ ರೀತಿ ಹಣ ಬಂದಿದೆಯೋ ಇಲ್ಲವೋ ಎಂದು ನಾನು 16 ನೆ ಪ್ರತಿವಾದಿಯನ್ನು ವಿಚಾರಣೆ ಮಾಡಿಲ್ಲ. ನನಗೆ ಮತ್ತು ನನ್ನ ತಂಗಿಗೆ ಎಷ್ಟು ಹಣ ಸಂದಾಯವಾಗಿದೆ ಎಂದು ನೆನಪಿಲ್ಲ. ನನಗೆ ಮತ್ತು ನನ್ನ ತಂಗಿಗೆ ರೂ. 5970750/- ರೂ.ಗಳು ಸಂದಾಯವಾಗಿದೆ ಎಂದರೆ ನನಗೆ ನೆನಪಿಲ್ಲ. ನನ್ನ ತಾಯಿಯ ಭಾಗ ಹಾಗೂ 16 ನೆ ಪ್ರತಿವಾದಿಯ ಭಾಗ ಸಂಪೂರ್ಣವಾಗಿ ಮಾರಾಟ ಆಗಿದೆ ಎಂದರೆ ಸರಿಯಲ್ಲ.

ನಮ್ಮ ತಾಯಿ ಮತ್ತು ಚಿಕ್ಕಮ್ಮ ಇವರಿಗೆ ಸೇರಿದ 5 ಎಕರೆ 6 ಗುಂಟೆ ಜಮೀನು ಮಾರಾಟ ಆಗಿದೆ. ಅದನ್ನು ಭಾನುಮತಿ ಮತ್ತು ರಾಘವೇಂದ್ರ ಇವರಿಗೆ ಮಾರಾಟ ಮಾಡಿದೆ. ಅದರ ಕ್ರಯದ ಹಣ ನಮಗೆ ಸಂದಾಯವಾಗಿದೆ ಎಂದರೆ ಸರಿಯಲ್ಲ.
ಅವರಿಂದ ನಮಗೆ ಹಣ ಯಾವುದೆ ಬಂದಿಲ್ಲ. ಅವರು ಕ್ರಯದ ಹಣವನ್ನು 1 ನೆ ಪ್ರತಿವಾದಿಯ ಖಾತೆಗೆ ಹಾಕಿದ್ದರು ಎಂದು ಕೇಳಿದ್ದೇನೆ. 5 ಎಕರೆ 6 ಗುಂಟೆಗೆ ಸಂಬಂಧಿಸಿದ ಹಣದಲ್ಲಿ ನಮಗೆ ಬರಬೇಕಾದ ಹಣ ಬಂದಿದೆ. ಪೂರ್ತಿ 10 ಎಕರೆ 13 ಗುಂಟೆಯ ಹಣ ಬಂದಿಲ್ಲ. ವಾದಪತ್ರದಲ್ಲಿ 5 ಎಕರೆ 6 ಗುಂಟೆ ಜಮೀನು ಮಾರಾಟವಾಗಿದೆ ಎಂದು ಬರೆಯಿಸಿದ್ದೇವೆ ಎಂದರೆ ಸರಿ. ಹಣ ಬಂದ

ಬಗ್ಗೆ ಬರೆಸಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.

ಕ್ರಯವಾದ ನಂತರ ಭಾನುಮತಿ ಮತ್ತು ರಾಘವೇಂದ್ರ ಇವರು ಆ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಜಮೀನನ್ನು ನೋಡದೆ 3-4 ವರ್ಷವಾಗಿದೆ. ಏಕೆಂದರೆ ಚಿಕ್ಕಬೈರಪ್ಪ ಇವರ ಮಕ್ಕಳು ಮತ್ತು ಹೆಂಡತಿ ಅಲ್ಲಿಗೆ ಹೋದರೆ ಅವಾಚ್ಯವಾಗಿ ಬೈಯ್ಯುತ್ತಾರೆ. ಕೇಸ್ ಹಾಕುವಾಗ ಭಾನುಮತಿ ಮತ್ತು ರಾಘವೇಂದ್ರ ಇವರ ಹೆಸರಿನಲ್ಲಿ ಆರ್ ಟಿ ಸಿ ಗಳು ಇದ್ದವು. ಈಗ ಯಾರ ಹೆಸರಿನಲ್ಲಿವೆ ಎಂದು ನನಗೆ ಗೊತ್ತಿಲ್ಲ. ಸ.ನಂ. 40 ರಲ್ಲಿ 11 ಎಕರೆ 19 ಗುಂಟೆ ಪೈಕಿ ಪ್ರತಿವಾದಿ 1 ರಿಂದ 6 ರವರು 2 ಎಕರೆ ಜಮೀನನ್ನು ದಿನಾಂಕಃ 19.09.2016 ರಂದು ಬಸವರಾಜು ಬಿನ್ ಅಂದಾನಪ್ಪ ಇವರಿಗೆ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಾಗಿದೆ. ಅದನ್ನು ನಮಗೆ ಗೊತ್ತಿಲ್ಲದಂತೆ ಮಾರಾಟ ಮಾಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಆ ಜಮೀನಿನಲ್ಲಿ ಬಸವರಾಜು ಇವರು ಸ್ವಾಧೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸ್ವತ್ತು ಭಾಗದಲ್ಲಿ ಚಿಕ್ಕಬೈರಪ್ಪ ಇವರಿಗೆ ಹೋಗಿತ್ತು ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ ಃ 9.08.2018 ರಂದು 1 ನೆ ಪ್ರತಿವಾದಿ 2 ನೆ ಪ್ರತಿವಾದಿಗೆ ಸ.ನಂ, 41/2 ರಲ್ಲಿ 3 ಎಕರೆ 11 ಗುಂಟೆ ಜಮೀನಿಗೆ ದಾನಪತ್ರ ಆಗಿದೆ ಎಂದರೆ ಸರಿ. ಅದು ನನಗೆ ನಂತರ ಗೊತ್ತಾಗಿದೆ ಅದಕ್ಕೆ ನಮ್ಮ ಒಪ್ಪಿಗೆ ಪಡೆದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆ ಸ್ವತ್ತಿನ ಆರ್ ಟಿ ಸಿ 2 ನೆ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. 2 ನೆ ಪ್ರತಿವಾದಿಯು ದಾನ ಪಡೆದ ಸ್ವತ್ತಿನಲ್ಲಿ 1 ಎಕರೆ 17 ಗುಂಟೆಯನ್ನು 16 ನೆ ಪ್ರತಿವಾದಿ ಚಿಕ್ಕಮ್ಮ ಇವರಿಗೆ ಯಾವುದೆ ರೀತಿಯ ಹಣ ಪಡೆಯದೆ ಕ್ರಯಪತ್ರವನ್ನು ದಿನಾಂಕಃ 19.01.2021 ರಂದು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಕ್ರಯದಾರರು ತಾವು ಕ್ರಯಕ್ಕೆ ಪಡೆದ ಸ್ವತ್ತಿನ ಖಾತೆ ಪಹಣಿ ಮಾಡಿಸಿಕೊಂಡು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ನಮಗೆ ಬರಬೇಕಾದ ಸ್ವತ್ತನ್ನು ಈಗಾಗಲೇ ನಾವು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. 1 ನೆ ಪ್ರತಿವಾದಿಗೆ ಸೇರಿದ ಸ್ವತ್ತುಗಳಲ್ಲಿ ಭಾಗ ಬೇಕೆಂದು ಸುಳ್ಳು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ. ಅದರಲ್ಲಿ ಮಾರಾಟ ವಾಗಿರುವ ಸ್ವತ್ತುಗಳನ್ನು ಸೇರಿಸಿ ಕ್ರಯದಾರರನ್ನು ಪಾರ್ಟಿ ಮಾಡದೆ ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಮಗೆ ಯಾವುದೆ ಭಾಗ ಬರಬೇಕಾಗಿಲ್ಲ ಎಂದರೆ ಸರಿಯಲ್ಲ. ನಮಗೆ ದಾವಾ ಸ್ವತ್ತುಗಳಲ್ಲಿ 5 ವರೆ ಎಕರೆ ಭಾಗ ಬರಬೇಕಾಗುತ್ತದೆ. ನಮ್ಮ ಪಿತ್ರಾರ್ಜಿತ ಸ್ವತ್ತು 22 ಎಕರೆ ಇದೆ. ಕೇಸ್ ನಲ್ಲಿ 10 ಎಕರೆಯನ್ನು ಮಾತ್ರ ತೋರಿಸಿದ್ದೇವೆ.

ಸ.ನಂ. 40 ರಲ್ಲಿ 11 ಎಕರೆ 37 ಗುಂಟೆ ಮತ್ತು ಸ.ನಂ. 41 ರಲ್ಲಿ 9 ಎಕರೆ 36 ಗುಂಟೆಗಾಗಿ ದಾವೆ

ಮಾಡಿದ್ದೇವೆ. ಅವುಗಳು ಬೇರೆ ಬೇರೆ ಚೆಕ್ ಬಂದಿ ಇವೆ. ಸ.ನಂ. 40 ರ ಪೂರ್ವಕ್ಕೆ ಸ.ನಂ. 31, ಪಶ್ಚಿಮಕ್ಕೆ ಕಾಲುದಾರಿ, ಉತ್ತರಕ್ಕೆ ಕಾಲುದಾರಿ ಮತ್ತು ದಕ್ಷಿಣಕ್ಕೆ ಸ.ನಂ. 41 ಬರುತ್ತದೆ. ಸ.ನಂ. 41 ರ ಪೂರ್ವಕ್ಕೆ ಸ.ನಂ. 37, ಪಶ್ಚಿಮಕ್ಕೆ ದಾರಿ, ಉತ್ತರಕ್ಕೆ ಸ.ನಂ. 40 ಮತ್ತು ದಕ್ಷಿಣಕ್ಕೆ ರಸ್ತೆ ಬರುತ್ತದೆ. ಇದೆ ಚೆಕ್ ಬಂದಿಯನ್ನು ಬರೆಯಿಸಿ ಕೇಸ್ ಹಾಕಿದ್ದೇವೆ. ಸ.ನಂ. 39 ಮತ್ತು 37 ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲ. ಆ ಸ್ವತ್ತಿನಲ್ಲಿ ಈಗ ಯಾರು ಸ್ವಾಧೀನದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ಭಾನುಮತಿ ಮತ್ತು ರಾಘವೇಂದ್ರ ಇವರಿಗೆ ಮಾರಾಟ ಮಾಡಿದ ನಮ್ಮ ಭಾಗದ ಸ್ವತ್ತನ್ನು ಬಿಟ್ಟು ಉಳಿದ ಸ್ವತ್ತಿಗಾಗಿ ನಾವು ಕೇಸ್ ಮಾಡಿದ್ದೇವೆ. ಉಳಿದ ಸ್ವತ್ತಿನಲ್ಲಿ ಯಾರು ಸ್ವಾಧೀನದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸ.ನಂ. 40 ರಲ್ಲಿ ಎರಡು ಪೋಡುಗಳಾಗಿವೆ ಸ.ನಂ. 41 ರಲ್ಲಿ 3 ಪೋಡುಗಳಾಗಿವೆ ಅವುಗಳಿಗಾಗಿ ದಾವೆ ಮಾಡಿದ್ದೇವೆ. ಪ್ರತಿ ಒಂದು ಪೋಡಿ ವಿಸ್ತೀರ್ಣ ಮತ್ತು ಚೆಕ್ ಬಂದಿ ಹೇಳಲು ಬರುವುದಿಲ್ಲ. ಅವುಗಳು ಯಾವಾಗ ವಿಭಜನೆಯಾದವು ಎಂದು ನನಗೆ ಗೊತ್ತಿಲ್ಲ.

ಭಾನುಮತಿ ಮತ್ತು ರಾಘವೇಂದ್ರ ಇವರಿಗೆ ನಮ್ಮ ಮತ್ತು 16 ನೆ ಪ್ರತಿವಾದಿಯ ಒಪ್ಪಿಗೆ ಮೇರೆಗೆ ಮಾರಾಟ ಆಗಿದೆ ಎಂದರೆ ಸರಿ. ಆ ಪ್ರಕಾರ ನಮ್ಮ ಭಾಗದಲ್ಲಿ ನಮಗೆ ಸೇರಬೇಕಾದ ಹಣ ಸೇರಿದೆ ಎಂದರೆ ಸರಿ. ಅದರಲ್ಲಿ ನಾವು ಮಾರಿದ ಭಾಗಕ್ಕೆ ಬರಬೇಕಾದ ಹಣ ಬಂದಿದೆ ಎಂದರೆ ಸರಿ. 1 ನೆ ಪ್ರತಿವಾದಿಯು ಯಾವುದೆ ಹಣ ಇಟ್ಟುಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಭಾಗದ ಜಮೀನನ್ನು ಮಾರಾಟ ಮಾಡಿ 1 ನೆಪಿ ಪ್ರತಿವಾದಿಯ ಭಾಗಕ್ಕೆ ಇದ್ದ ಜಮೀನಿಗಾಗಿ ಕೇಸ್ ಮಾಡಿದ್ದೇವೆ ಎಂದರೆ ಸರಿಯಲ್ಲ. ಸತ್ಯಾಂಶವನ್ನು ಮುಚ್ಚಿಟ್ಟು ಪ್ರತಿವಾದಿಗಳ ಭಾಗದ ಸ್ವತ್ತನ್ನು ಹೊಡೆದುಕೊಳ್ಳಬೇಕೆಂದು ಸುಳ್ಳು ಕೇಸ್ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**13 ನೆ ಪ್ರತಿವಾದಿಯ ಪರವಾಗಿ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**